ಅಪ್ಪಿಕೊಳ್ಳುವುದು ಅವಳಿಂದ ಸಾಧ್ಯವಾಗಲೇ ಇಲ್ಲ.

ಲಕ್ಷ್ಮಿ ಗರ್ಭಿಣಿಯಾದಾಗ ಅವಳ ವಯಸ್ಸು ಮೂವತ್ತನಾಲ್ಕು. ಕೇಶವನ ವಯಸ್ಸು ಮೂವತ್ತೊಂಬತ್ತು. ಇಷ್ಟು ದಿನಗಳಾದ ಮೇಲೆ ಹುಟ್ಟುವ ಮಗು ಹೇಗಿರುತ್ತದೆಯೋ ಎಂಬ ಆತಂಕದಿಂದ ಆಗಾಗ ವೈದ್ಯರ ಬಳಿ ತೆರಳಿ ಪರೀಕ್ಷಿಸಿಕೊಂಡು ವೈದ್ಯರಿಂದ ಮಗು ಆರೋಗ್ಯವಾಗಿದೆ ಎಂಬುದನ್ನು ದೃಢಪಡಿಸಿಕೊಂಡು ಸಮಾಧಾನ ಹೊಂದುತ್ತಿದ್ದರು. ಸುನಂದಾಳ ಆರನೆಯ ತರಗತಿ ಪರೀಕ್ಷೆ ಮಗಿದು ಉತ್ತಮ ಅಂಕಗಳೊಡನೆ ಪಾಸಾಗಿದ್ದಳು. ನನಗೆ ತಮ್ಮನೋ ತಂಗಿಯೋ ಬರುತ್ತಾಳೆ ಎಂಬ ಸಂತಸದಿಂದ ಬೆಳಿಗ್ಗೆ ಬೇಗನೇ ಎದ್ದು ತನ್ನ ಮಮ್ಮಿಗೆ ಮನೆಗೆಲಸಗಳಲ್ಲಿ ಸಹಾಯ ಮಾಡತೊಡಗಿದಳು. ಆದರೆ, ಲಕ್ಷ್ಮಿಯ ಮನಸ್ಸಿನಲ್ಲಿ ಯಾಕೋ ಏನೋ ಮಗಳ ಮೇಲಿದ್ದ ಮೊದಲಿನ ಪ್ರೀತಿ, ವಾತ್ಸಲ್ಯಗಳು ಕಡಿಮೆಯಾಗತೊಡಗಿದವು. ಯಾವುದೋ ಯೋಚನೆಯಲ್ಲಿ ಮುಳುಗಿದ ಲಕ್ಷ್ಮಿಗೆ ದಿನಗಳು ತುಂಬಿ ಬೆಂಗಳೂರಿನಲ್ಲಿಯೇ ಇದ್ದ ತನ್ನ ತಾಯಿಯ ಮನೆಗೆ ಚೊಚ್ಚಲ ಹೆರಿಗೆಗಾಗಿ ತೆರಳಿದಳು. ನರ್ಸಿಂಗ್ ಹೋಮ್ ಒಂದರಲ್ಲಿ ಸುಸೂತ್ರ ಹೆರಿಗೆಯಾಗಿ ಮುದ್ದಾದ ಗಂಡುಮಗುವಿನ ತಾಯಿಯಾದಳು. ಆರೋಗ್ಯವಂತ ಗಂಡುಮಗು ಜನಿಸಿದುದರಿಂದ ಲಕ್ಷ್ಮಿ ಮತ್ತು ಕೇಶವರ ಮನಸ್ಸಿಗೆ ಸಮಾಧಾನವಾಯಿತು. ತನ್ನ ತಮ್ಮನನ್ನು ನೋಡಿದ ಸುನಂದಾಳಿಗೆ ಆದ ಸಂತೋಷ ಹೇಳತೀರದು. 'ಮಮ್ಮೀ... ಪಾಪೂಗೆ ಏನು ಹೆಸರಿಡೋದು ಮಮ್ಮೀ... ಯಾರೂ ಇಡದೇ ಇರೋ ಹೆಸರು ಇಡಬೇಕು ಮಮ್ಮೀ... ನನ್ನ ಫ್ರೆಂಡ್ಸನ್ನೆಲ್ಲಾ ಕರೆದು ನೇಮಿಂಗ್ ಸೆರಮನಿ ದೊಡ್ಡದಾಗಿ ಮಾಡಬೇಕು ಮಮ್ಮೀ...' ಎಂದು ಸಡಗರದಿಂದ ಅಲವತ್ತುಕೊಂಡರೂ ಲಕ್ಷ್ಮಿ ಏನೊಂದೂ ಪ್ರತಿಕ್ರಿಯಿಸದೇ ಬೇರೇನೋ ಆಲೋಚನೆಯಲ್ಲಿ ಮುಳುಗಿದ್ದಳು.

ಲಕ್ಷ್ಮಿ ತನ್ನ ತಾಯಿಯ ಮನೆಯಲ್ಲಿ ಬಾಣಂತನಕ್ಕಾಗಿ ಉಳಿದಾಗ ಮನೆಯಲ್ಲಿ ಕೇಶವ ಮತ್ತು ಸುನಂದಾ ಇಬ್ಬರೇ ಉಳಿದರು. ಕೇಶವ ಮನೆಯಲ್ಲಿ ಏನೇ ಕೆಲಸ ಮಾಡಲು ಹೋದರೂ ಸುನಂದಾ ಬಿಡುತ್ತಿರಲಿಲ್ಲ. ತನ್ನ ಮಮ್ಮಿಯ ಹಿಂದೆ ತಿರುಗಿ ಅವಳು ಮಾಡುತ್ತಿದ್ದ ಮನೆಯ ಎಲ್ಲಾ ಕೆಲಸಗಳನ್ನು ಗಮನಿಸಿದ್ದ ಸುನಂದಾ 'ನಾನು ಮಾಡ್ತೀನಿ ಬಿಡಿ ಡ್ಯಾಡಿ...' ಎಂದು ಹೇಳಿ ಗ್ಯಾಸ್ ಸ್ಟೌ ಮೇಲೆ ಕುಕ್ಕರ್ ಇಟ್ಟು ಅನ್ನ ಮಾಡುವುದು, ತನಗೆ ತಿಳಿದಂತೆ ಸಾರು ಮಾಡುವುದು, ವಾಷಿಂಗ್ ಮೆಷಿನ್ನಿನಲ್ಲಿ ಬಟ್ಟೆ ಒಗೆಯುವುದು, ನೆಲ ಒರೆಸುವುದು ಎಲ್ಲವನ್ನೂ ಮಾಡುತ್ತಲೇ ಶಾಲೆಗೂ ಹೋಗಿ ಬರುತ್ತಿದ್ದಳು. ಲಕ್ಷ್ಮಿ ತವರುಮನೆಯಲ್ಲಿ ಬಾಣಂತನ ಮುಗಿಸಿಕೊಂಡು ಆರು ತಿಂಗಳ ನಂತರ ಮನೆಗೆ ಬಂದ ಮೇಲೂ ಸುನಂದಾ ಅವಳಿಗೆ ಇನ್ನಿಲ್ಲದಂತೆ ಸಹಾಯ ಮಾಡತೊಡಗಿದಳು. ಶಾಲೆಯಿಂದ ಬಂದ ತಕ್ಷಣವೇ ತನ್ನ ತಮ್ಮನ ಬಳಿಗೆ ಓಡೋಡಿ ಹೋಗಿ ತೊಟ್ಟಿಲಿನಲ್ಲಿ ಬಗ್ಗಿ ನೋಡುತ್ತಿದ್ದಳು. ಆದರೆ ಇದೆಲ್ಲವನ್ನು ಗಮನಿಸಿದರೂ ಲಕ್ಷ್ಮಿಗೆ ಏನೊಂದೂ ಅನಿಸುತ್ತಲೇ ಇರಲಿಲ್ಲ. ಸುನಂದಾಳ ಬಗೆಗಿನ ಅವಳ ಮನೋಭಾವ ನಿಧಾನವಾಗಿ ಬದಲಾಗತೊಡಗಿತು. ಕೆಲವೇ ದಿನಗಳಲ್ಲಿ ಲಕ್ಷ್ಮಿಗೆ ಸುನಂದಾಳ ಮೇಲಿದ್ದ ಪ್ರೀತಿ, ವಾತ್ಸಲ್ಯಗಳು ಕರಗಿ ಮಾಯವಾಗಿಹೋದವು. ಸುನಂದಾ ತನ್ನ ವಾರಗಿತ್ತಿಯ ಮಗಳು ಎಂಬುದು ಅವಳಿಗೆ ಅರಿವಾಗತೊಡಗಿತ್ತು.

ಅದೊಂದು ದಿನ ರಾತ್ರಿ ಹಾಸಿಗೆಯಲ್ಲಿ ಮಲಗಿದಾಗ ಲಕ್ಷ್ಮಿ ತನ್ನ ಗಂಡನೊಂದಿಗೆ ನಿಧಾನವಾಗಿ ಮಾತು ಪ್ರಾರಂಭಿಸಿದಳು. 'ನಮ್ಮ ಮಗನನ್ನು ಒಳ್ಳೆಯ ಸ್ಕೂಲಿಗೆ ಸೇರಿಸಿ ಚೆನ್ನಾಗಿ ಓದಿಸಬೇಕು... ಈಗ ಕೂಡಿಟ್ಟಿರುವ ಹಣದ ಜೊತೆಗೆ ಬ್ಯಾಂಕಿನಲ್ಲಿ ಒಂದಷ್ಟು ಸಾಲ